

ಲೇಸ್ ಟಾಪ್ ಮೇಲೆ ನಿಟೆಡ್ ಸ್ವೆಟರ್ ಅಥವಾ ಕ್ರೊಷೆಟ್ ಹಾಕಿಕೊಳ್ಳಬಹುದು. ಇದು ಕೂಡಾ ಉದ್ದವಾಗಿದ್ದರೆ ಭಿನ್ನವಾಗಿರುತ್ತದೆ.

ಎಲ್ಲವೂ ಸಡಿಲವಾಗಿ ಜೋಲಾಡುವಂತಿರಬೇಕು ಎಂದೇನೂ ಇಲ್ಲ. ನೀಟಾಗಿ ಕೂರುವ ಉಡುಪುಗಳ ಜೊತೆ ಸಡಿಲ ವಸ್ತ್ರಗಳನ್ನು ಹೊಂದಿಸಿಕೊಳ್ಳಬಹುದು. ಬಿಗಿಯಾದ ಪ್ಯಾಂಟ್ ಅಥವಾ ಸ್ಕರ್ಟ್ ಜೊತೆ ಸಡಿಲ ಟಾಪ್ ಧರಿಸಬಹುದು. ಹಳೆಯದಾದ, ಫೇಡ್ ಆದ ನೀಲಿ ಜೀನ್ಸ್ ಜೊತೆ ಬಿಳಿ ನಾರಿನ ಬಟ್ಟೆಯ ಟಾಪ್ ಹಾಗೂ ಸಡಿಲವಾದ ನಿಟೆಡ್ ಸ್ವೆಟರ್ ಧರಿಸಬಹುದು. ಜೊತೆಗೊಂದು ಸ್ಕಾರ್ಫ್ ಕತ್ತಿಗೆ ಸುತ್ತಿಕೊಂಡರೆ ವ್ಯಕ್ತಿತ್ವ ಎದ್ದು ಕಾಣುತ್ತದೆ. ಕಂದು ಅಥವಾ ಚರ್ಮದ ಬಣ್ಣದ ಕಣಕಾಲು ಮಟ್ಟದ, ಚಪ್ಪಟೆ ತಳವಿರುವ ಶೂ ಅಥವಾ ಕೌಬಾಯ್ ಶೂ ಕೂಡಾ ಹಾಕಬಹುದು.

ಆದರೆ ನಿಮ್ಮಲ್ಲಿರುವ ಉಡುಪುಗಳು ಗುಲಾಬಿ, ಕಡುಗೆಂಪು, ಹಳದಿ ಮೊದಲಾದ ಗಾಢ ಬಣ್ಣಗಳಲ್ಲಿದ್ದರೆ ಈ ಬೊಹೊ ಸ್ಟೈಲ್‌ನಿಂದ ದೂರವೇ ಇರುವುದು ಒಳಿತು. ನಿಯಾನ್ ಬಣ್ಣ ಕೂಡಾ ಈ ಲುಕ್‌ಗೆ ಅಲರ್ಜಿಯೇ. ನೈಸರ್ಗಿಕ ವರ್ಣದ ಉಡುಪುಗಳ ಜೊತೆ ಒಂದೆರಡನ್ನು ಮಾತ್ರ ಗಾಢ ವರ್ಣದ ಬಟ್ಟೆಗಳನ್ನು ತೊಡಬಹುದು. ಉದಾಹರಣೆಗೆ ಸ್ಕಾರ್ಫ್.

ಹಾಗೆಯೇ ಎಲ್ಲವನ್ನೂ ಲೇಯರ್‌ನಲ್ಲಿ ಧರಿಸುವುದೂ ಫ್ಯಾಷನ್ ದೃಷ್ಟಿಯಿಂದ ಒಳ್ಳೆಯದಲ್ಲ. ನಿಮ್ಮ ಅಂದವಾದ ದೇಹ ಗುಡಾರದಂತೆ ಕಾಣಬಹುದಷ್ಟೆ. ಆದರೆ ಬಾಗಿ ಬಳುಕುವಂತಹ ದೇಹ ಹೊಂದಿರುವವರು ಈ ಪ್ರಯೋಗ ಮಾಡಬಹುದು. ತೆಳ್ಳಗಾಗಿದ್ದು, ಕುಳ್ಳಗಾಗಿದ್ದರೆ ಉದ್ದನೆಯ, ನೆರಿಗೆಯುಳ್ಳ ಉಡುಪಿನಲ್ಲಿ ಮುಳುಗಿ ಹೋಗಿ ಕೆಟ್ಟದಾಗಿ ಕಾಣಬಹುದು. ಅಂಥವರು ಗಿಡ್ಡನೆಯ ಟಾಪ್ ಮತ್ತು ಸ್ಕರ್ಟ್, ಬಿಗಿಯಾಗಿ ದೇಹಕ್ಕೆ ಹೊಂದಿಕೊಳ್ಳುವ ಪ್ಯಾಂಟ್ ಜೊತೆಗೆ ಎತ್ತರ ಹಿಮ್ಮಡದ ಶೂ ಹಾಕಬಹುದು.

ಬೊಹೊ ಸ್ಟೈಲ್‌ನಲ್ಲಿ ಇತರ ಆ್ಯಕ್ಸೆಸರಿಗಳೂ ಅಷ್ಟೇ ಮುಖ್ಯ. ತೆಳ್ಳನೆಯ ಬೆಳ್ಳಿ ಅಥವಾ ಸ್ಟೀಲ್ ಬ್ರೇಸ್‌ಲೆಟ್, ಕಟ್ಟಿಗೆಯ ಮಣಿಗಳುಳ್ಳ ಮೆಕ್ಸಿಕನ್ ಬಳೆ ಕೈಗಳಿಗಾದರೆ, ಸಣ್ಣ ಗೆಜ್ಜೆಗಳುಳ್ಳ ನೂಪುರ ಪಾದಗಳ ಅಂದ ಹೆಚ್ಚಿಸುತ್ತದೆ. ಲೋಹದ ಹಾಗೂ ಮಣಿಗಳ ಉದ್ದನೆಯ ಕಿವಿಯೋಲೆ ಅಥವಾ ದೊಡ್ಡದಾದ ಹೂಪ್ ರಿಂಗ್, ಕತ್ತಿಗೆ ಲೋಹ, ಕಲ್ಲು ಅಥವಾ ಕಪ್ಪೆಚಿಪ್ಪಿನ ಸರ ಧರಿಸಿ.

ಅಗಲವಾದ ಹ್ಯಾಟ್, ಹೆಗಲಿಗೆ ಉದ್ದನೆಯ ಜೋಲಿ ಅಥವಾ ಅಂಚಿಗೆ ಕಸೆಯಂತೆ ಜೋಲುವ ಫ್ರಿಂಜ್ಡ್ ಚೀಲ ಹಾಕಿಕೊಂಡರೆ ಒಟ್ಟಾರೆ ಬೊಹೊ ಲುಕ್ ಪೂರ್ಣಗೊಳ್ಳುತ್ತದೆ. ಪ್ರವಾಸ ಮಾಡುವಾಗ, ಶಾಪಿಂಗ್‌ಗೆ, ಸ್ನೇಹಿತರ ಜೊತೆ ತಿರುಗಾಡುವಾಗ ಈ ಬೊಹೊ ಲುಕ್ ಓಕೆ. ಕಚೇರಿಗೆ ಮಾತ್ರ ಬೇಡವೇ ಬೇಡ ಎಂಬುದು ಉಡುಪು ವಿನ್ಯಾಸಕಾರರ ಸಲಹೆ.